## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 255 |
| ಸದಸ್ಯರ ಹೆಸರು | ಶ್ರೀ ಕೆ. ಸಿ. ಕೊಂಡಯ್ಯ |
| ಉತ್ತರಿಸುವ ಸಚಿವರು | ಮಾನ್ಯ ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | 04.03.2020 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟಂತೆ ಮೂಲ ಮಾಲೀಕರ ಸಹಿ ಇಲ್ಲದೆ, ಕೃಷಿ ಭೂಮಿಗಳನ್ನು ಸರ್ಕಾರಿ ಅಧಿಕಾರಿಗಳು ಬೇರೆಯವರಿಗೆ ಖಾತೆ ಮಾಡಿಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| 2 | ಮೂಲ ಕೃಷಿ ಜಮೀನಿನ ಮಾಲೀಕರು ಮತ್ತೆ ತಮ್ಮ ಜಮೀನನ್ನು ವಶಕ್ಕೆ ಪಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಅನ್ವಯಿಸುವುದಿಲ್ಲ |
| 3 | ಈ ಕಾರ್ಯದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ; | ಅನ್ವಯಿಸುವುದಿಲ್ಲ |
| 4 | ಸರ್ವೆ ನಂ.99/5, 24/ಸಿ, ಕುಡುಗುಬಾಳು ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆಯ 10 ವರ್ಷಗಳ ದಾಖಲೆ ಪರಿಶೀಲಿಸಿ ಮಾಹಿತಿ ನೀಡುವುದು? | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಕುಡುಗುಬಾಳು ಗ್ರಾಮದ ಸರ್ವೇ ನಂ.99/5 ರಲ್ಲಿನ 0.18 ಗುಂಟೆ ಜಮೀನಿಗೆ ಎಂ.ಆರ್.09/1990-91 ರಂತೆ ಕೆ. ವಿ. ವರದರಾಜುರವರ ಹೆಸರಿನಲ್ಲಿ ಖಾತೆಯಾಗಿ ಆರ್.ಟಿ.ಸಿ ಬಂದಿರುತ್ತದೆ.<br><br>ತದನಂತರ ಚಿಕ್ಕೆಗೌಡ ಬಿನ್. ಬೆಟ್ಟಯ್ಯರವರಿಗೆ ಕ್ರಯವಾಗಿದ್ದು, ಎಂ.ಆರ್.ಸಂ.02/03-04ರಂತೆ ಖಾತೆಯಾಗಿ ಪ್ರಸ್ತುತ ಆರ್.ಟಿ.ಸಿ ಮತ್ತು ಖಾತೆ ಚಿಕ್ಕೆಗೌಡ ಬಿನ್. ಬೆಟ್ಟಯ್ಯ ಇವರ ಹೆಸರಿನಲ್ಲಿರುತ್ತದೆ.<br><br>ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಕುಡುಗುಬಾಳು ಗ್ರಾಮದ ಸರ್ವೆ ನಂ.24/ಸಿರಲ್ಲಿನ 0.25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಆರ್. ಆರ್.ನಂ.1647 ವಿಭಾಗದಂತೆ ಬಿ.ಮರಿಗೌಡ ಬಿನ್.ಕರಾಟೆ ಬೆಟ್ಟೆಗೌಡ ರವರ ಹೆಸರಿಗೆ ಆರ್.ಟಿ.ಸಿ ಮತ್ತು ಖಾತೆ ಇದ್ದು ನಂತರದಲ್ಲಿ ಎಂ.ಆರ್.15/19-20 ರಂತೆ ಇವರ ಹೆಂಡತಿ ಶ್ರೀಮತಿ ಪುಟ್ಟತಾಯಮ್ಮ ಕೋಂ. ಬಿ. ಮರಿಗೌಡರ ಹೆಸರಿಗೆ ಪೌತಿ ಖಾತೆಯಾಗಿ ಇವರ ಹೆಸರಿಗೆ ಹಾಲಿ ಆರ್.ಟಿ.ಸಿ. ಮತ್ತು ಖಾತೆ ಇರುತ್ತದೆ. |

ಕಂಇ 34 ಟಿಆರ್‌ಎಂ 2020

(ಆರ್. ಅಶೋಕ)
ಮಾನ್ಯ ಕಂದಾಯ ಸಚಿವರು